**ಓ.ಎಸ್. ನಂಬರಃ 20/2020**

**ಡಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 20 /07/2024 )**

**ಪಾಟೀ ಸವಾಲು : ವಾದಿ ಪರ ಶ್ರೀ ಆರ್ ಆರ್ ಎಸ್ ವಕೀಲರಿಂದ,**

ಈ ದಾವೆಯಲ್ಲಿ ಐದು ಜನ ವಾದಿಯರು ಇದ್ದಾರೆ. ಈ ದಾವೆಯಲ್ಲಿರುವ ದಾವಾ ಸ್ವತ್ತಿನ ಸರ್ವೆ ನಂಬರ 427 ಆಗಿರುತ್ತದೆ. 2010 ನೇ ಇಸವಿಗಿಂತ ಪೂರ್ವದಲ್ಲಿ ಸದ್ರಿ ಸರ್ವೆ ನಂಬರನಲ್ಲಿ ವಾದಿಯ ಕುಟುಂಬಕ್ಕೆ ನಾಲ್ಕು ಕಾಲು ಗುಂಟೆ ಮತ್ತು ನಮ್ಮ ಕುಟುಂಬಕ್ಕೆ ನಾಲ್ಕು ಕಾಲು ಗುಂಟೆಗೆ ಹಿಸ್ಸಾ ಆಗಿತ್ತು. ನಮ್ಮ ಕುಟುಂಬಕ್ಕೆ ಭೂನ್ಯಾಯ ಮಂಡಳಿಯ ಆದೇಶದಂತೆ ಸದ್ರಿ ನಾಲ್ಕು ಕಾಲು ಗುಂಟೆ ಜಮೀನು ಬಂದಿರುತ್ತದೆ. ದಾವಾ ಆಸ್ತಿಯ ಮೂಲ ಪುರುಷನ ಹೆಸರು ದೇವಯ್ಯ. ಅವರ ತಂದೆಯ ಹೆಸರು ಗೊತ್ತಿಲ್ಲ.



2. ಸರ್ವೆ ನಂಬರ 427/1 ಬ ರಲ್ಲಿರುವ ನಾಲ್ಕು ಗುಂಟೆ ಜಮೀನು ವಾದಿಯ ತಂದೆಯಾದ ಜಟ್ಟಯ್ಯ ಸುಕ್ರಯ್ಯ ದೇವಾಡಿಗರವರಿಗೆ ಭೂನ್ಯಾಯ ಮಂಡಳಿಯಿಂದ ಮಂಜೂರಾದ ಆಸ್ತಿಯಾಗಿರುತ್ತದೆ ಎಂದರೆ ಸರಿ. ಸದ್ರಿ ಆದೇಶದ ಪ್ರತಿಯನ್ನು ನಾನು ನೋಡಿರುವುದಿಲ್ಲ. ನಮ್ಮ ಕುಟುಂಬಕ್ಕೆ ಭೂನ್ಯಾಯ ಮಂಡಳಿಯಿಂದ ಪ್ರತ್ಯೇಕ ಆದೇಶ ಆಗಿ ನಾಲ್ಕು ಗುಂಟೆ ಜಮೀನು ಮಂಜೂರಾಗಿರುತ್ತದೆ ಎಂದರೆ ಸರಿ. ಭೂನ್ಯಾಯ ಮಂಡಳಿಯ ಆದೇಶದಂತೆ ಮಂಜೂರಿಯಾದ ಜಮೀನಿನಲ್ಲಿ ವಾದಿ ಮತ್ತು ಪ್ರತಿವಾದಿಗಳಾದ ನಾವು ವಹಿವಾಟೆ ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು .**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**